## ಕರ್ನಾಟಕ ವಿಧಾನ ಪರಿಷತ್

| | |
|---|---|
| ವಿಧಾನ ಪರಿಷತ್ ಸದಸ್ಯರ ಹೆಸರು | :ಡಾ॥ ಚಂದ್ರಶೇಖರ್ ಬಿ ಪಾಟೀಲ್ (ಪದವೀಧರ ಕ್ಷೇತ್ರ) |
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : 819 (1098) |
| ಉತ್ತರಿಸಬೇಕಾದ ದಿನಾಂಕ | : 28.12.2022 |

**ವಿಷಯ: ರಸ್ತೆ ಸುಧಾರಣೆ ಕುರಿತು.**

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| 1 | ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನ ಗಡಿ ಭಾಗದ ಹಲವು ತಾಂಡಾಗಳಿಗೆ ರಸ್ತೆ ಸಂಪರ್ಕವಿಲ್ಲದೆ ಜನರು ಮತ್ತು ವಿದ್ಯಾರ್ಥಿಗಳು ಸಾಕಷ್ಟು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. | ಬಂದಿದೆ. |
| 2 | ಬಂದಿದ್ದಲ್ಲಿ, ದಶಕ ಕಳೆದರೂ ಇಲ್ಲಿಯವರೆಗೆ ಯಾವುದೇ ರಸ್ತೆ ನಿರ್ಮಾಣ ಮಾಡದೇ ಇರಲು ಕಾರಣವೇನು? | ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ಗಡಿಭಾಗ ಪ್ರದೇಶದಲ್ಲಿ ಬರುವ 17 ತಾಂಡಾಗಳಿಗೆ ರಸ್ತೆ ಸಂಪರ್ಕವಿಲ್ಲದೆ ಇರುವ ಬಗ್ಗೆ ಮಾಹಿತಿ ಲಭ್ಯವಿರುತ್ತದೆ. ಇವುಗಳ ಒಟ್ಟು ಉದ್ದ 29.60 ಕಿ.ಮೀ ಯಾಗಿರುತ್ತದೆ. ಸದರಿ ರಸ್ತೆಗಳು ಖಾಸಗಿ ಜಮೀನಿನ ಮೂಲಕ ಹಾದು ಹೋಗಿರುತ್ತವೆ ಹಾಗೂ ಇಲಾಖೆಯ ಡಿ.ಆರ್.ಆರ್.ಪಿ ಪಟ್ಟಿಯಲ್ಲಿ ಸೇರಿರುವುದಿಲ್ಲ.<br><br>ಸದರಿ ರಸ್ತೆಗಳು ಖಾಸಗಿ ಜಮೀನಿನ ಮೂಲಕ ಹಾದು ಹೋಗಿರುವುದರಿಂದ ಭೂ ಮಾಲೀಕರು ಸ್ವ-ಇಚ್ಛೆಯಿಂದ ರಸ್ತೆ ಮಾಡಲು ಗ್ರಾಮ ಪಂಚಾತಿಗಳಿಗೆ ಜಾಗವನ್ನು ಬಿಟ್ಟುಕೊಟ್ಟಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ರಸ್ತೆಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗುವುದು. |

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ